## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

## ಸಿ.ಸಿ. ಸಂಖ್ಯೆಃ 2371/2025

ಪಿರ್ಯಾದಿ : ರಾಜ್ಯ, ಪರವಾಗಿ ಮೂಡಿಗೆರೆ ಪೊಲೀಸರು,
ಮೂಡಿಗೆರೆ ತಾಲ್ಲೂಕು.

ವಿರುದ್ಧ

ಆರೋಪಿ : ರಘು, ವಯಸ್ಸು ಸುಮಾರು 60 ವರ್ಷ,
ಬಿನ್ ದಿಃ ಅಣ್ಣೇಗೌಡ,
ವಾಸಃ ನಡುವಿನ ಮಾಡ್ಕಲ್ ಗ್ರಾಮ,
ಮೂಡಿಗೆರೆ ತಾಲ್ಲೂಕು.

### ದೋಷಾರೋಪಣೆ

ಶ್ರೀಮತಿ ಸುರಕ್ಷ ಕೆ.ಕೆ., *C/c* ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ-

ದಿನಾಂಕ 30.07.2025 ರಂದು ಸಂಜೆ ಸುಮಾರು 5.00 ರ ಸಮಯದಲ್ಲಿ ಮೂಡಿಗೆರೆ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಆರೋಪಿಯಾದ ನೀವು ಸಾಕಿದ್ದ ನಾಯಿಯು ಸುಮ್ಮನಿರದೆ ಚಾಸಾ1-ನಾಗೇಶ್ ಗೌಡ ರವರ ದನದ ಕೊಟ್ಟಿಗೆಯ ಹತ್ತಿರ ಬಂದು ದನಗಳನ್ನು ಕಚ್ಚಲು ಹೋದಾಗ, ದನದ ಕೊಟ್ಟಿಗೆಯಲ್ಲಿ ಕೆಲಸ ಮಾಡುತ್ತಿದ್ದ ಚಾಸಾ1 ರವರು ದನದ ಕೊಟ್ಟಿಗೆಯ ಮುಂಭಾಗದ ಖಾಲಿ ಜಾಗಕ್ಕೆ ಬಂದು ಇನ್ನೇನು ನಾಯಿ ದನಗಳನ್ನು ಕಚ್ಚಿ ಬಿಡುತ್ತದೆ ಎಂಬ ಆತಂಕದಿಂದ ಅಲ್ಲೇ ಬಿದ್ದಿದ್ದ ಕಾಡು ಜಾತಿಯ ದೊಣ್ಣೆಯಿಂದ ನಾಯಿಗೆ ಹೊಡೆದಿದ್ದು, ಇದರಿಂದ ಸಿಟ್ಟುಗೊಂಡ ಆರೋಪಿಯಾದ ನೀವು ಜಮೀನು ಹಂಚಿಕೆಯ ವಿಚಾರವನ್ನು ಪ್ರಸ್ತಾಪಿಸುತ್ತಾ ಚಾಸಾ1 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **352** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮುಂದುವರೆದು, ಅಲ್ಲೇ ಬಿದ್ದಿದ್ದ ಕಾಡು ಜಾತಿಯ ದೊಣ್ಣೆಯಿಂದ ಚಾಸಾ1 ರವರ ಎಡಕೈಗೆ, ಬೆನ್ನು ಮತ್ತು ಕುತ್ತಿಗೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **118(1)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**3.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮುಂದುವರೆದು, ಚಾಸಾ1 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ **351(2)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ*,* ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ*.*

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ***?*** ಅವುಗಳು ನಿಮಗೆ ಅರ್ಥವಾಯಿತೇ***?***

ಆರೋಪಿಯ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ***?***

ಆರೋಪಿಯ ಉತ್ತರಃ

***(***ಆರೋಪಿತರಿಗೆ ದಿನಾಂಕ 18.02.2026 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ*,* ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು*.* ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ***)***

**Sd/-**

ಮೂಡಿಗೆರೆ*,*
ದಿನಾಂಕಃ 18.02.2026

***C/c*** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ*.*ಎಂ*.*ಎಫ್*.*ಸಿ*,*
ಮೂಡಿಗೆರೆ*.*